# Telephone Conversation between PM and Sultan of Oman

April 07, 2020

## ಪ್ರಧಾನ  ಮಂತ್ರಿ ಮತ್ತು ಒಮಾನ್‌ನ ಸುಲ್ತಾನ್ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 07, 2020

ಪ್ರಧಾನ  ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಒಮಾನ್ ಸುಲ್ತಾನ್ ಹಿಸ್ ಮೆಜೆಸ್ಟಿ ಹೈಥಮ್ ಬಿನ್ ತಾರಿಕ್ ರವರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಹೆಚ್ಚುತ್ತಿರುವ ಕೋವಿಡ್ -19 ಸಾಂಕ್ರಾಮಿಕ ರೋಗದಿಂದ ಉಂಟಾಗುವ ಆರೋಗ್ಯ ಮತ್ತು ಆರ್ಥಿಕ ಸವಾಲುಗಳಿಗೆ ಮತ್ತು ಅವುಗಳಿಗೆ ಸ್ಪಂದಿಸಲು ಆಯಾ ದೇಶಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು. ಬಿಕ್ಕಟ್ಟನ್ನು ಎದುರಿಸಲು ಎರಡೂ ದೇಶಗಳು ಪರಸ್ಪರ ಬೆಂಬಲವನ್ನು ನೀಡುತ್ತವೆ ಎಂದು ಅವರು ಒಪ್ಪಿಕೊಂಡರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಒಮಾನ್‌ನಲ್ಲಿರುವ ಭಾರತೀಯ ಸಮುದಾಯದ ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ಹಿಸ್ ಮೆಜೆಸ್ಟಿ ದಿ ಸುಲ್ತಾನ್ ರವರು  ಪ್ರಧಾನ ಮಂತ್ರಿಯವರಿಗೆ ಭರವಸೆ ನೀಡಿದರು. ಭಾರತದ ಒಮಾನ್ ನಾಗರಿಕರಿಗೆ ಭಾರತ ಸರ್ಕಾರ ಇತ್ತೀಚೆಗೆ ನೀಡಿದ ಬೆಂಬಲಕ್ಕೆ ಅವರು ಪ್ರಧಾನ ಮಂತ್ರಿಗಳಿಗೆ ಧನ್ಯವಾದ ಅರ್ಪಿಸಿದರು.

ಹೆಚ್‌ಎಂ ದಿವಂಗತ ಸುಲ್ತಾನ್ ಖಬೂಸ್ ರವರ ನಿಧನಕ್ಕೆ ಪ್ರಧಾನ  ಮಂತ್ರಿ ತಮ್ಮ ಸಂತಾಪವನ್ನು ಪುನರುಚ್ಚರಿಸಿದರು. ಹೆಚ್‌ಎಂ ಸುಲ್ತಾನ್ ಹೈಥಮ್ ಆಳ್ವಿಕೆಯಲ್ಲಿ ಮತ್ತು ಒಮಾನ್ ಜನರ ಶಾಂತಿ ಮತ್ತು ಸಮೃದ್ಧಿಗೆ ಅವರು ತಮ್ಮ ಶುಭಾಶಯಗಳನ್ನು ತಿಳಿಸಿದರು. ಭಾರತವು ಒಮಾನ್ ತನ್ನ ವಿಸ್ತೃತ ನೆರೆಹೊರೆಯ ಒಂದು ಪ್ರಮುಖ ಭಾಗವೆಂದು ಪರಿಗಣಿಸುತ್ತದೆ ಎಂದು ಅವರು ಒತ್ತಿ ಹೇಳಿದರು.

**ನವ ದೆಹಲಿ**
**ಏಪ್ರಿಲ್ 07, 2020**

DISCLAIMER : This is an approximate translation. The original is available in English on MEA’s website and may be referred to as the official press release.